ಕಡೂರು ಡಿಸ್ಟ್ರಿಕ್ಟ್.

ತಾರೀಖು 1ನೇ ಏಪ್ರೆಲ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ತರೀಕೆರೇ ತಾಲ್ಲೂಕು ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಜೇವಾರಸಾಗಿ ಯಿರತಕ್ಕ ಕೆಳಗೆ ವಿವರಿ ಸೋಣಾದ ದಸ್ತ್ಯೆವಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವಂದು ತಿಂಗಳೊಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಬ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
112 ——— 1881—82	ಬುಕ್ಕಾಂಬುದಿ ಗ್ರಾಮದ ವಾಸಸ್ಥನಾದ ಕಡೂರು ನಂಜ	ಬುಕ್ಕಾಂಬುದಿ ಗ್ರಾಮದ ವಾಸಸ್ಥ ಶಾನಭೋಗ ರಾಘು ಯ್ಯ	13—3—82	13—3—82	ಬುಕ್ಕಾಂಬುದಿ ಸಮೀಪ ದೊಡ್ಡಕೆರೆ ಹಿಂದಣ ಸರ್ವೆ ನಂಬರ್ 168ನೇ ಗುಂಟೆ 30 ಆಕಾರ 11 ರೂಪಾಯಿವುಳ್ಳ ಬಾಗಾಯತು 300 ರೂಪಾಯಿಗೆ ಖರೀದಿಗೆಕೊಟ್ಟರವದಾಗಿ.

ಜೆ. ಎಫ್. ಮೈಕಲ್‌ಜಾರ್ಜ್,
ರಿಜಿಸ್ಟ್ರಾರ್.

ಗವರ್ಮೆಂಟ್ ಗಾರ್ಡನ್ಸ್.

ತಾರೀಖು 16ನೇ ಏಪ್ರೆಲ್ 1884.

ಲಾಲ್‌ಬಾಗನಲ್ಲಿ ಗಿಡದ ಮೇಲಿರುವ ಮಾವು, ಹಲಸು, ಪನ್ನೇರಳೆ, ಕವಳಿಕೆ ಫಲಗಳು ಮಾಹೆ ಮಜಕೂರ್ 23ನೇ ಮುಕ್ಕಂ ಬುಧವಾರ ಮಧ್ಯಾನ್ಹ 12 ಘಂಟೆಗೆ ಸೂಪರ್ಟಿಂಡೆಂಟರ ಕಛೇರಿಯಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ಕಬ್ಬನ್ ಪಾರ್ಕನಲ್ಲಿಯೂ ರೆಸಿಡೆನ್ಸಿ ಕಂಪೌಂಡಿನಲ್ಲಿಯೂ ಗಿಡದ ಮೇಲಿರುವ ಮಾವು, ಹಲಸು, ಪನ್ನೇರಳೆ ಫಲಗಳು ಮಾಹೆ ಮಜಕೂರ್ 22ನೇ ಮೊದಕುಂ ಮಂಗಳವಾರ ಬೆಳಿಗ್ಗೆ 8 ಘಂಟೆಗೆ ಸದರೀ ಪಾರ್ಕನಲ್ಲಿ ಅದೇ ರೀತಿಯಾಗಿ ವಿಕ್ರಯಿಸಲ್ಪಡುವದು.

ಇನ್ನೂ ವಿಶೇಷ ತಪಸೀಲ್ ಬಗ್ಗೆ ಈ ಕೆಳಗೆ ದಸ್ತಖತ್ತು ಮಾಡಿರುವವರಿಗೆ ಬರದುಕೊಳ್ಳತಕ್ಕದ್ದು.

ಜೆ. ಕ್ಯಾಮರ್ಜ್,
ಸೂಪರ್ಟಿಂಡೆಂಟ್, ಗವರ್ಮೆಂಟ್ ಗಾರ್ಡನ್ಸ್.

ಕ್ರಿಸ್ಟಲ್ಲೈಸ್ಡ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ಮೆಂಟ್ ಕೋಠೀಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧವಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಜ್ಡ್ ಅಲ್ಲದ ಫ್ಯಾಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು, ಕಲ್ಕತ್ತೆ ಬಳಿ ಸೀಬ್‌ಪೋರ್ ಸಮೀಪದಲ್ಲಿ ರಾಯಲ್‌ಬೊಟಾನಿಕ್ ಗಾರ್ಡನ್ ಸೂಪರ್ಟಿಂಡೆಂಟರಿಂದ ಗವರ್ಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಬಂದು ಸಲಕ್ಕೆ ಇಪ್ಪತ್ತು ಪೌಂಡು ಮತ್ತೆ ಆದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಬಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡನ್ ಸೂಪರ್ಟಿಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಬಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯರ್ಸ್ ಮತ್ತು ನೇಟಿವ್ ಡ್ರಗ್ಗಿಸ್ಟ್‌ಗಳು ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ ಳ್ಳ.